

# ಡರ್ ಕೆ ಆಗೆ ಜೀತ್ ಹೈ!

■ ಗೌರಿ

**ಹೆಣ್ಣು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಬೇಕು ಎಂದರೆ ತನ್ನ ಸುತ್ತ ಹೆಣೆಯಲಾಗಿರುವ ಸದ್ಗೃಹಿಣಿಯ ಇಮೇಜ್ ಅನ್ನು ಒಡೆಯುವುದು ಅನಿವಾರ್ಯ ಎನ್ನುವುದನ್ನು ಈ ಕಿರುಚಿತ್ರ ಸಶಕ್ತವಾಗಿ ಹೇಳುತ್ತದೆ.**

ಹೆಣ್ಣಿಗೆ ತನ್ನದೇ ಆದ ಒಂದು ವೈಯಕ್ತಿಕ ಬದುಕು, ವ್ಯಕ್ತಿತ್ವ ಇರುತ್ತದೆ ಎಂಬುದೇ ಪುರುಷಪ್ರಪಂಚಕ್ಕೆ ಇನ್ನೂ ಅರಿವಾಗಿಲ್ಲ. ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಹೀಗೆ ಬದುಕಿನ ವಿವಿಧ ಘಟ್ಟಗಳಲ್ಲಿ ಕುಟುಂಬದ ಇತರ ಸದಸ್ಯರ ಬದುಕಿನ ಭಾಗವಾಗಿ ಇರುವುದೇ ಅವಳ ಜೀವನ ಎಂದು ನಮ್ಮ ಸಮಾಜವೂ, ಸಂಪ್ರದಾಯಗಳೂ, ರೂಢಿಗಳು ಅದರಿಂದ ರೂಪುಗೊಂಡ ಮನಸ್ಥಿತಿಗಳೂ ಒಟ್ಟೊಟ್ಟಿಗೇ ಸೇರಿ ನಿರ್ಣಯಿಸಿರುವ ಹಾಗಿದೆ. ಅಪ್ಪ, ಅಮ್ಮನಿಗೆ ಕಷ್ಟಕೊಟ್ಟು ಸಾಧಿಸುವುದು ಏನನ್ನು? ಗಂಡ, ಮಕ್ಕಳನ್ನು ಖುಷಿಯಾಗಿಡದೇ ಏನು ಸಾಧಿಸಿದರೆ ಏನು ಪ್ರಯೋಜನ? ಅತ್ತೆ, ಮಾವಂದಿರನ್ನು ಹೆತ್ತವರ ಹಾಗೆಯೇ ನೋಡಿಕೊಳ್ಳುವುದೇ ಬದುಕಿನ ಗುರಿಯಾಗಿರಬೇಕು –ಹೀಗೆ ಹೀಗೆ ಪರರ ಬದುಕಿನ ಊರುಗೋಲಾಗಿ ಮಾತ್ರವೇ ಹೆಣ್ಣಿನ ಅಸ್ತಿತ್ವ ಎಂಬ ಮನಸ್ಥಿತಿಯನ್ನು ಕಳೆಯಲು ಶಿಕ್ಷಣ, ಆಧುನಿಕತೆ, ಜೀವನಮಟ್ಟ ಇವ್ಯಾವಕ್ಕೂ ಸಾಧ್ಯವಾಗಿಲ್ಲ ಎಂಬುದು ವಿಪರ್ಯಾಸವಲ್ಲದೇ ಇನ್ನೇನು?

ಇಂಥ ವಿಪರ್ಯಾಸಗಳ ನಡುವೆಯೇ ಹೆಣ್ಣೊಬ್ಬಳು ತನ್ನ ಧ್ವನಿಯನ್ನು ಕಂಡುಕೊಳ್ಳುವ ಕಥೆಯನ್ನು ‘ಡರೋ ಮತ್’ ಎಂಬ ಕಿರುಚಿತ್ರ ಹೇಳುತ್ತದೆ. ಇಲ್ಲಿನ ಪಾತ್ರಗಳಾಗಲಿ, ಸನ್ನಿವೇಶಗಳಾಗಲಿ ತುಂಬ ಹೊಸವೇನೂ ಅಲ್ಲ. ಈಗಾಗಲೇ ಹತ್ತಾರು ಸಿನಿಮಾಗಳಲ್ಲಿ ನೋಡಿರುವವೇ. ಆದರೆ ಅದನ್ನು ಕಟ್ಟಿದ ರೀತಿ ಆಶಯದ ದೃಷ್ಟಿಯಿಂದ ಮಹತ್ವದ್ದು.

ಇದರ ಮೊದಲ ದೃಶ್ಯವೇ ತುಂಬ ಸೂಕ್ಷ್ಮವಾಗಿದೆ. ಆಟೊದಿಂದ ಇಳಿದ ಹುಡುಗಿಯೊಬ್ಬಳು ರಸ್ತೆ ಬದಿಯ ಟೀ ಅಂಗಡಿಯಲ್ಲಿ ಸಮೋಸ ಕೇಳುತ್ತಿದ್ದಾಳೆ. ಆ ಅಂಗಡಿಯಲ್ಲಿ ನಿಂತಿರುವವರೆಲ್ಲ ಗಂಡಸರೇ. ಅವರು ಯಾರೂ ಅವಳನ್ನು ಕೆಟ್ಟ ದೃಷ್ಟಿಯಿಂದೇನೂ ನೋಡುವುದಿಲ್ಲ; ಆದರೆ ಅಲ್ಲಿ ಹೆಣ್ಣೊಬ್ಬಳಿಗೆ ಅನ್‌ಕಂಫರ್ಟ್ ಅನಿಸುವಂಥ ವಾತಾವರಣ ತಂತಾನೆಯೇ ಸೃಷ್ಟಿಯಾಗಿರುತ್ತದೆ. ಅದು ಪಾತ್ರದ ನೋಟ, ಚಡಪಡಿಕೆಯಲ್ಲಿಯೇ ವ್ಯಕ್ತವೂ ಆಗುತ್ತದೆ.



**ಹೆಸರು:** ಡರೋ ಮತ್
**ನಿರ್ದೇಶನ:** ಲಕ್ಷ್ಮೀ ದೇವಿ, ಉನ್ನಿಕೃಷ್ಣನ್ ಪಯೂರ್ ಪರಮೇಶ್ವರನ್
**ಛಾಯಾಗ್ರಹಣ:** ಸಂತನಾ ಕೃಷ್ಣನ್ ರವಿಚಂದ್ರನ್
**ಸಂಕಲನ:** ಉನ್ನಿಕೃಷ್ಣನ್ ಪಯೂರ್ ಪರಮೇಶ್ವರನ್
**ಹಿನ್ನೆಲೆ ಸಂಗೀತ:** ಅಭಿಷೇಕ್ ಪಲಾಂಡೆ
**ತಾರಾಗಣ:** ಲಕ್ಷ್ಮೀ ದೇವಿ, ಮೊಯಿನ್ ಖಾನ್, ನಿತಿಯಾ ರವಿಚಂದರ್, ಕಲ್ಯಾಣಿ ನಟರಾಜ್, ಅಜಯ್ ಸಿಂಘಾಲ್, ಅರುಣ್

ಹೀಗೆ ಹೆಣ್ಣಿಗೆ ಅನ್‌ಕಂಫರ್ಟ್ ಅನಿಸುವಂಥ ಎಷ್ಟೊಂದು ಜಾಗಗಳು ನಮ್ಮ ಸಾರ್ವಜನಿಕ ಸ್ಥಳಗಳಲ್ಲಿ ಇವೆಯಲ್ಲವೇ? ಟೀ ಅಂಗಡಿ, ಹೋಟೆಲ್, ಚಾಟ್ ಕಾರ್ನರ್ ಇವುಗಳೆಲ್ಲ ಬಿಡಿ, ರಸ್ತೆ ಬದಿಯ ಬಸ್‌ಸ್ಟ್ಯಾಂಡುಗಳೂ ಮಹಿಳೆಯರಿಗೆ ಕಂಫರ್ಟ್ ಜಾಗ ಅಲ್ಲವೆಂದರೆ ನಾವು ರೂಪಿಸಿಕೊಂಡಿರುವ ಸಮಾಜ ಎಂಥದಿರಬೇಕು? ಇದಕ್ಕೆ ಕಾರಣ ಏನಿರಬಹುದು?

ಈ ಚಿತ್ರದ ನಾಯಕಿ ದಿವ್ಯಾ ಬಿ.ಎ. ಓದುತ್ತಿರುವ ಹುಡುಗಿ. ಅಂತಿಮವರ್ಷದ ಅಂತಿಮ ಪರೀಕ್ಷೆ 27ನೇ ತಾರೀಕಿಗೆ ಇದೆ. ಆದರೆ 25ಕ್ಕೆ ಅವಳ ಮದುವೆ. ಗಂಡನಿಗೆ ಅವಳ ಪರೀಕ್ಷೆ ಇರುವುದು ತಿಳಿದು, ಏನೇ ಆಗಲಿ ನೀನು ಆ ಪರೀಕ್ಷೆ ಬರೆಯಬೇಕು ಎನ್ನುತ್ತಾನೆ. ಆದರೆ ಪರೀಕ್ಷೆಯ ಹಿಂದಿನ ದಿನ ಮುಂಬೈನಲ್ಲಿ ನಡೆದ ಟೆರರಿಸ್ಟ್ ದಾಳಿಯ ಜಾಗದಲ್ಲಿ ಅವನೇ ಮಾಯವಾಗಿಬಿಡುತ್ತಾನೆ.

ಈಗ ಎಲ್ಲರ ಕೋಪವೂ ದಿವ್ಯಾಳ ಮೇಲೆ. ಅವಳು ಹೊತ್ತುತಂದ ದುರ್ದೈವದ ಮೇಲೆ. ಮನೆಯ ಅನಿಷ್ಟಕ್ಕೆಲ್ಲ ಅವಳೇ ಕಾರಣ ಎಂದು ಜರಿಯುತ್ತಾಳೆ. ಮರುದಿನ ಬೆಳಗೆದ್ದರೆ ಅವಳಿಗೆ ಪರೀಕ್ಷೆ. ಆ ವಿಷಯ ಮನೆಯಲ್ಲಿ ಯಾರಿಗೂ ಗೊತ್ತಿಲ್ಲ. ಈಗ ನೋಡಿದರೆ ಗಂಡ ಕಾಣೆಸುತ್ತಿಲ್ಲ. ಅವನು ಬದುಕಿದ್ದಾನಾ ಇಲ್ಲವಾ ಎಂಬುದೂ ಗೊತ್ತಿಲ್ಲ. ಮದುವೆಯಾಗಿ ಎರಡು ದಿನಗಳಷ್ಟೇ ಆಗಿವೆ. ಅವಳು ಪರೀಕ್ಷೆಗೆ ಹೊಗಬೇಕೋ ಅಥವಾ ಗಂಡ ಕಾಣೆಯಾದ ಬಗ್ಗೆ ದುಃಖಿಸುತ್ತ ಮನೆಯಲ್ಲಿರಬೇಕೋ?

ಅವಳು ಪರೀಕ್ಷೆ ಬರೆಯುವುದನ್ನು ಆಯ್ದುಕೊಳ್ಳುತ್ತಾಳೆ. ಈ ಆಯ್ಕೆಯಲ್ಲಿಯೇ ಕಿರುಚಿತ್ರದ ಯಶಸ್ಸಿರುವುದು. ಮಗಳು, ಹೆಂಡತಿ, ತಾಯಿ ಈ ಎಲ್ಲ ಪಾತ್ರಕ್ಕಿಂತ ಮೊದಲು ಮತ್ತು ಅವುಗಳಿಗಿಂತ ತುಂಬ ಬೇರೆಯದೇ ಆಗಿ ಹೆಣ್ಣಿಗೆ ತನ್ನದೇ ಆದ ಒಂದು ಅಸ್ಮಿತೆ ಇದೆ. ಆಸೆ ಆಕಾಂಕ್ಷೆಗಳಿವೆ ಮತ್ತು ಮನುಷ್ಯಸಹಜವಾದ ಆ ಅಸ್ಮಿತೆಯನ್ನು ಕಂಡುಕೊಳ್ಳುವುದು ಸಮಾಜದ ಕಟ್ಟಳೆಗಳ ಪ್ರಕಾರ ತಪ್ಪು ಎಂಬುದಾದರೆ ಆ ಕಟ್ಟಳೆಯನ್ನು ಒಡೆಯಬೇಕು ಎಂಬುದನ್ನು ಈ ಕಿರುಚಿತ್ರ ತುಸು ದೊಡ್ಡ ಧ್ವನಿಯಲ್ಲಿಯೇ ಹೇಳುತ್ತದೆ.

ಕಿರುಚಿತ್ರ ವೀಕ್ಷಣೆಗೆ https://bit.ly/3D32Nj6 ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.